*

<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C: 511/2015
CW-6 PW-5

ಹೆಸರು : ಗಡ್ಡಪ್ಪಾ

ತಂದೆ ಹೆಸರು : ಚಂದ್ರಪ್ಪ

ವಯಸ್ಸು : 61 ವರ್ಷ

ಉದ್ಯೋಗ : ನಿವೃತ್ತ ಮುಖ್ಯ ಪೇದೆ

ವಾಸ ಸ್ಥಳ : ಕಲಬುರಗಿ

---

<u>ಪ್ರಮಾಣವಚನ ಭೋಧಿಸಲಾಯಿತು. ದಿಃ 16.02.2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2010 ರಿಂದ 2017 ರವರೆಗೆ ಮಾಡಬೂಳ್ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 23.09.2015ರಂದು ಸಂಜೆ 05.00 ಗಂಟೆಗೆ ಚಾಸಾ-1ರವರು ಒಂದು ಟ್ರ್ಯಾಕ್ಟರನ್ನು ಮತ್ತು ಅದರೊಂದಿಗೆ ಟ್ರಾಲಿಯನ್ನು ಪೋಲೀಸ್ ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ. ಸದರಿ ಟ್ರಾಲಿಯಲ್ಲಿ ಸಾದಾ ಮರಳು ಇತ್ತು. ಚಾಸಾ-1ರವರು ನೀಡಿದ ಸ್ವ ದೂರಿನ ಆಧಾರದ ಮೇಲೆ ನಾನು ಪ್ರ.ವರ್ತಮಾನ ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಪೋಲೀಸ್ ಠಾಣೆಯಲ್ಲಿದ್ದ ಟ್ರ್ಯಾಕ್ಟರ್ ಮತ್ತು ಟ್ರಾಲಿಯ ಪಂಚನಾಮೆಯನ್ನು ಚಾಸಾ- 2 ಮತ್ತು 3ರವರ ಸಮಕ್ಷಮ ಜರುಗಿಸಿ ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ- 2 ಮತ್ತು 3ರವರ ಸಮಕ್ಷಮ ರಾತ್ರಿ 08.30 ರಿಂದ 09.00 ಗಂಟೆ ಸಮಯದಲ್ಲಿ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಅದೇ ದಿನ ಚಾಸಾ- 4 ಮತ್ತು 5ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿಃ 18.10.2015 ರಂದು ಆರೋಪಿತರು ಪೋಲೀಸ್ ಠಾಣೆಗೆ ಹಾಜರಾಗಿದ್ದು ಅವರನ್ನು ಸೂಕ್ತ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ. ಆ ದಿನ ನನ್ನ ಸಮಕ್ಷಮ

ಹಾಜರಾದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿತರು ಗೈರು ಹಾಜರಿದ್ದು ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ವಿನಾಯಿತಿ ಅರ್ಜಿ ಸಲ್ಲಿಸಲಾಗಿದೆ.

ನಾನು ದಾಖಲಿಸಿದ ಪ್ರ.ವರ್ತಮಾನ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಪ್ರ.ವರ್ತಮಾನ ವರದಿಯನ್ನು ನಿಪಿ-4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 4ಎ ಎಂದು ಗುರುತಿಸಲಾಯಿತು. ನಾನು ಜರುಗಿಸಿದ ಪಂಚನಾಮೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಪಂಚನಾಮೆಗಳು ಈಗಾಗಲೇ ನಿಪಿ- 2 ಮತ್ತು 3 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-2ಸಿ ಮತ್ತು 3ಇ ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದೂರು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 1ಬಿ ಎಂದು ಗುರುತಿಸಲಾಯಿತು. ಚಾಸಾ-7ರವರಿಗೆ ನಾನು ಮುಂದಿನ ತನಿಖೆಯನ್ನು ಬಿಟ್ಟುಕೊಟ್ಟಿದ್ದು ಅವರು ಈಗಾಗಲೇ ತೀರಿಕೊಂಡಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಬಿ.ಕೆ. ವಕೀಲರಿಂದ -</u>

ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಚಾಸಾ-1ರವರು ಯಾವುದೇ ದೂರನ್ನು ನಿಮಗೆ ನೀಡಿಲ್ಲ ಎಂದರೆ ಸರಿಯಲ್ಲ. ನೀವು ಸದರಿ ದೂರಿನ ಪ್ರಕಾರ ಯಾವುದೇ ಪ್ರ.ವರ್ತಮಾನ ವರದಿಯನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಪಂಚನಾಮೆಗಳನ್ನು ಪಂಚರ ಸಮಕ್ಷಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೋಲೀಸ್ ಠಾಣೆಯ ಅಂಕೆ-ಸಂಖ್ಯೆಗೋಸ್ಕರ ನಿಮ್ಮ ಮೇಲಧಿಕಾರಿಗಳು ಮಾಡಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.